ತಪಸ್ಯೆಯಲ್ಲಿಯೇ ಆನಂದವನ್ನು ಕಂಡ

ಮಹಾಚೇತನ

ಸ್ವಾಮಿ ಆಶುತೋಷಾನಂದ

ಅವತರಣಿಕೆ: ಒಮ್ಮೊಮ್ಮೆ ನಾವು ರೈಲು ನಿಲ್ದಾಣಕ್ಕೆ ಧಾವಿಸುತ್ತೇವೆ. ಆದರೆ ರೈಲು ಆಗಲೇ ಹೊರಟುಬಿಟ್ಟಿರುತ್ತದೆ. ನಮ್ಮ ಜೀವನದಲ್ಲಿ ಇಂಥ ಘಟನೆಗಳು ಅಪರೂಪವೇನಲ್ಲ. ಇಂಥವು ಆಧ್ಯಾತ್ಮಿಕ ಜೀವನದಲ್ಲಿಯೂ ನಡೆಯುತ್ತವೆ. ಒಬ್ಬ ಸಂತವ್ಯಕ್ತಿಯ ಜೊತೆಗೆ ಅನವರತವೂ ಬದುಕಿಬಾಳುವ ಅವಕಾಶ ನಮಗೆ ಪ್ರಾಪ್ತವಾಗಿರುತ್ತದೆ. ಆದರೆ ಅವರ ಮಹಾನತೆಯನ್ನು ನಾವು ಅರ್ಥಮಾಡಿಕೊಳ್ಳಲು ಆರಂಭಿಸುವ ಮುನ್ನವೇ ಅವರು ಜಗತ್ತನ್ನು ಬಿಟ್ಟುಹೋಗಿರುತ್ತಾರೆ. ನಾವು ಅವರ ಸಂಸರ್ಗದಲ್ಲಿದ್ದಾಗ, ಬಹುತೇಕ ಸಮಯವನ್ನು ಅವರಲ್ಲಿರಬಹುದಾದ ದೋಷಗಳನ್ನು ಗಮನಿಸುವುದರಲ್ಲಿಯೇ ಕಳೆದುಬಿಡುತ್ತೇವೆ. ಆದರೆ, ಅವರು ಎಂಥ ಮಹಾನ್ ವ್ಯಕ್ತಿಯಾಗಿದ್ದರು ಮತ್ತು ಅವರ ಒಡಗೂಡಿ ಬಾಳುವ ಎಂಥ ಸುವರ್ಣಾವಕಾಶ ನಮಗೆ ಪ್ರಾಪ್ತವಾಗಿತ್ತು ಎನ್ನುವುದನ್ನು ನಮಗೆ ಕಾಲವೇ ಕಲಿಸಿಕೊಡುತ್ತದೆ. ನಮಗೆ ವಯಸ್ಸಾದ ಹಾಗೆಲ್ಲ ಮತ್ತು ನಾವು ಅನುಭವವನ್ನು ಹೆಚ್ಚುಹೆಚ್ಚಾಗಿ ಪಡೆದುಕೊಂಡ ಹಾಗೆಲ್ಲ, ಆ ಮಹಾಪುರುಷರ ಜೀವನವನ್ನು ಅದರೆಲ್ಲ ಭವ್ಯತೆಯೊಡನೆ ಅರಿತುಕೊಳ್ಳಲು ಆರಂಭಿಸುತ್ತೇವೆ. ಪರಮಪೂಜ್ಯ ಸ್ವಾಮಿ ತಪಸ್ಯಾನಂದಜಿ ಮಹಾರಾಜ್ ಅವರ ಜೊತೆಗೆ ಬಾಳುವ ಸೌಭಾಗ್ಯವನ್ನು ಪಡೆದ ಅನೇಕ ಮಂದಿ ಜನರ ಪ್ರತ್ಯಕ್ಷ ಅನುಭವವಿದು.

ನನ್ನ ಕಾಲೇಜು ಅಧ್ಯಯನ ಮುಗಿದೊಡನೆ, ನಾನು ಕೆಲವು ಕಾಲ ಹಿಮಾಲಯದಲ್ಲಿ ತಂಗಿದ್ದೆನು. ೧೯೮೨ರಲ್ಲಿ ರಾಮಕೃಷ್ಣ ಮಹಾಸಂಘವನ್ನು ಸೇರುವ ಇಚ್ಛೆಯಿಂದ ಚೆನ್ನೈ ಶ್ರೀರಾಮಕೃಷ್ಣ ಮಠಕ್ಕೆ ಬಂದೆನು. ಆ ಸಮಯಲ್ಲಿ ಯಾವ ಪರಿಚಯಪತ್ರವೂ ನನ್ನ ಕೈಯಲ್ಲಿರಲಿಲ್ಲ. ನಾನು ಪೂಜ್ಯ ಸ್ವಾಮಿ ತಪಸ್ಯಾನಂದಜಿ ಮಹಾರಾಜರನ್ನು ಅವರ ಕಛೇರಿಯಲ್ಲಿ ಭೇಟಿಯಾದೆ. ಕೆಲವು ಸಾಮಾನ್ಯ ವಿಷಯಗಳ ಬಗ್ಗೆ ನನ್ನೊಡನೆ ವಿಚಾರಿಸಿದ ಸ್ವಾಮೀಜಿಯವರು, ನೇರವಾಗಿ ನನಗೆ ಹೀಗೆ ಹೇಳಿದರು: "ಹಿಮಾಲಯದಲ್ಲಿದ್ದುಕೊಂಡು ಪರಿವ್ರಾಜಕ ಶೈಲಿಯ ಜೀವನ ನಡೆಸುವುದರಲ್ಲಿ ನನಗೇನೂ ಅಷ್ಟು ವಿಶ್ವಾಸವಿಲ್ಲ. ಈ ಬಗೆಯ ತಿರುಗಾಟವನ್ನೇ ಅಭ್ಯಾಸಮಾಡಿಕೊಂಡಿರುವವರು, ಒಂದು ಸ್ಥಳದಲ್ಲಿ ಸ್ಥಿರವಾಗಿ ನೆಲೆಸಿ ಕಾರ್ಯವೆಸಗಲಾರರು. ರಾಮಕೃಷ್ಣ ಮಠದ ಜೀವನ, ಹಿಮಾಲಯದಲ್ಲಿನ ಜೀವನಶೈಲಿಗಿಂತ ಅತಿ ಭಿನ್ನವಾದದು. ಇಲ್ಲಿ ತಂಗಲು ಬೇರೆಯದೇ ರೀತಿಯ ಮನೋಧರ್ಮದ ಆವಶ್ಯಕತೆಯಿದೆ. ಆದ್ದರಿಂದ ನಿನ್ನನ್ನು ಒಡನೆಯೇ ಸೇರಿಸಿಕೊಳ್ಳಲು ಕಷ್ಟವಾಗುವುದು. ಆದರೂ ನೀನು ಇಲ್ಲಿ ಇರಬಹುದು –

ಚೆನ್ನೈ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರೂ, ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರೂ ಆಗಿದ್ದ ಪರಮಪೂಜ್ಯ ಸ್ವಾಮಿ ತಪಸ್ಯಾನಂದಜಿ ಅವರದು ಸರಳತೆಯೇ ಮೈವೆತ್ತ ಜೀವನ; ಆದರೆ ಅವರ ಬೌದ್ಧಿಕ ಚಿಂತನೆ ಮತ್ತು ಆಧ್ಯಾತ್ಮಿಕ ಅನುಭೂತಿಗಳು ಅತ್ಯುನ್ನತ ಮಟ್ಟದ್ದು. ಅಗಾಧ ಪಂಡಿತರಾಗಿದ್ದ ಅವರು ನೈಜ ತ್ಯಾಗದ ಜೀವನವನ್ನು ಬಾಳಿದವರು. ಈ ಅಂಶವನ್ನು ಈ ಸ್ಮರಣಿಕೆಯಲ್ಲಿ ಸುಮನೋಹರವಾಗಿ ಬಿಂಬಿಸಿರುವ ಪೂಜ್ಯ ಸ್ವಾಮೀಜಿಯವರು ಪ್ರಸ್ತುತ ಚೆನ್ನೈ ಶ್ರೀರಾಮಕೃಷ್ಣ ಮಠದ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತಮಿಳು ಭಾಷೆಯಲ್ಲಿ ಬಹು ಉತ್ತಮ ಬರಹಗಾರರಾಗಿರುವ ಇವರು ಹಲವಾರು ಸ್ವತಂತ್ರಕೃತಿಗಳ ಜೊತೆಗೆ, ಶಾಸ್ತ್ರಗ್ರಂಥಗಳನ್ನೂ ತಮಿಳುಭಾಷೆಗೆ ಅನುವಾದಿಸಿದ್ದಾರೆ. ಈ ಬರಹವನ್ನು ಇತ್ತೀಚೆಗೆ ಬಿಡುಗಡೆಯಾಗಿರುವ Swami Tapsyananda as we knew him ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ. (ಅನುವಾದ : ಸಂ.)

ಆಹಾರ ಮತ್ತು ವಸತಿಗಳನ್ನು ನಿನಗೆ ಪೂರೈಸಲಾಗುವುದು. ಆದರೆ ಇತರೆ ಸಂಗತಿಗಳು, ಅಂದರೆ ಬಟ್ಟೆ ಮುಂತಾದವನ್ನು ಒಂದು ವರ್ಷ ಕಳೆದ ನಂತರವೇ ನಿನಗೆ ಒದಗಿಸಲಾಗುವುದು." ಅನಂತರ ಕಠಿಣವಾದ ಸ್ವರದಲ್ಲಿ ಅವರು ಹೇಳಿದರು, "ಎರಡು ವರ್ಷಗಳ ಕಾಲ ಇಲ್ಲಿ ತಂಗಿರು. ನಿನಗೆ ವಹಿಸಿದ ಕೆಲಸಗಳನ್ನು ಮಾಡುತ್ತಿರು. ಈ ಬಗೆಯ ಜೀವನಕ್ಕೆ ನೀನು ಅರ್ಹನೆಂದು ಸಿದ್ಧಪಡಿಸು. ತದನಂತರವಷ್ಟೇ ರಾಮಕೃಷ್ಣ ಮಹಾಸಂಘದ ಸದಸ್ಯನಾಗಿ ನಿನ್ನನ್ನು ಸೇರಿಸಿಕೊಳ್ಳುವ ಬಗ್ಗೆ ನಾನು ಆಲೋಚಿಸುತ್ತೇನೆ." ಮುಂದುವರೆದು ಅವರು ನನ್ನನ್ನು ಕೇಳಿದರು, "ಶ್ರೀರಾಮಕೃಷ್ಣರನ್ನು ನೀನು ಭಗವಂತನ ಅವತಾರವೆಂದು ಒಪ್ಪುತ್ತೀಯೇನು?" "ಹೌದು" ಎಂದು ನಾನು ಉತ್ತರಿಸಿದೆ. "ಹಾಗಾದರೆ ಸರಿ" ಎಂದು ಹೇಳಿದರು. ಈ ಮೂಲಕ ಮಠದಲ್ಲಿ ತಂಗಲು ನನಗೆ ಅವಕಾಶವನ್ನು ಮಾಡಿಕೊಟ್ಟರು.

ತಾವು ಹೇಳಿದಂತೆ, ನಾನು ಮಹಾಸಂಘವನ್ನು ಸೇರಲು ಅವರು ಶಿಫಾರಸು ಮಾಡಿದ್ದು ಎರಡು ವರ್ಷಗಳ ನಂತರವಷ್ಟೇ. ಬಟ್ಟೆಬರೆಗಳನ್ನು ಒಂದು ವರ್ಷವಾದ ಮೇಲಷ್ಟೇ ಕೊಡುವುದಾಗಿ ಅವರು ಹೇಳಿದ್ದರಷ್ಟೇ. ಆದರೆ ಕೇವಲ ಒಂದು ವಾರದ ನಂತರ ಒಂದು ಜೊತೆ ಬಟ್ಟೆ ಮತ್ತಿತರ ಅವಶ್ಯಕ ಸಂಗತಿಗಳನ್ನು ಒದಗಿಸಿಕೊಟ್ಟರು. ಹೀಗೆ ಮಠದಲ್ಲಿ ಪೂಜ್ಯ ಸ್ವಾಮೀಜಿಯವರ ಜೊತೆಗಿನ ನನ್ನ ಬಾಳುವೆ ಆರಂಭವಾಯಿತು.

ಅವರ ಕಠಿಣವಾದ ವ್ಯವಹಾರ ಮತ್ತು ನೋಟ– ಇವುಗಳು, ಇವರೊಬ್ಬ ಸುಲಭವಾಗಿ ಸಮೀಪಿಸಬಹುದಾದ ವ್ಯಕ್ತಿಯಲ್ಲ ಎಂಬ ಭಾವನೆಯನ್ನು ನನ್ನಲ್ಲಿ ಮೂಡಿಸಿದ್ದವು. ಆದರೆ ದಿನಗಳು ಕಳೆದಂತೆ – ಅದರಲ್ಲೂ ನಾನು ಅಧ್ಯಯನದಲ್ಲಿ ಆಸಕ್ತಿಯುಳ್ಳವನೆಂದು ಅವರು ಕಂಡುಹಿಡಿದಾಗ – ಅವರು ತೋರಿದ ಅವ್ಯಾಜಪ್ರೀತಿ ನನ್ನ ಮನಸ್ಸನ್ನು ಸೂರೆಗೊಂಡಿತು. ಅಧ್ಯಯನದಲ್ಲಿ ಆಸಕ್ತಿಯುಳ್ಳ ಯಾರೇ ಆಗಲಿ, ಅವರನ್ನು ಉತ್ತೇಜಿಸುವುದು ಸ್ವಾಮೀಜಿಯವರ ಉದಾತ್ತ ಗುಣಗಳಲ್ಲಿ ಒಂದಾಗಿತ್ತು. ಇದಕ್ಕೆ ಕಾರಣ, ಸ್ವತಃ ಅವರೇ ರಾಮಕೃಷ್ಣ ಮಹಾಸಂಘದ ಅತಿ ಶ್ರೇಷ್ಠ ಚಿಂತಕರಲ್ಲಿ ಹಾಗೂ ವಿದ್ವಾಂಸರಲ್ಲಿ ಒಬ್ಬರಾಗಿದ್ದರು.

ಲಘುಪ್ರಸಂಗಗಳು: ೧೯೮೨ರಲ್ಲಿ ನಾನು ಮಠವನ್ನು ಸೇರಿಕೊಂಡ ಕೆಲಕಾಲದಲ್ಲಿ, ಪೂಜ್ಯ ಸ್ವಾಮೀಜಿಯವರ ಸೇವೆ ಮಾಡುತ್ತಿದ್ದ ಬ್ರಹ್ಮಚಾರಿಗಳು ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಲು ಬೇಲೂರುಮಠಕ್ಕೆ ತೆರಳಿದರು. ಹೀಗೆ ಅವರ ಸೇವೆಯನ್ನು ಮಾಡುವ ಅವಕಾಶ ನನಗೆ ದೊರೆಯಿತು. ಅವರ ಸೇವೆಯೆಂದರೆ ಸರಳವಾದ ಎರಡು ಕೆಲಸಗಳಾಗಿದ್ದವು ಅಷ್ಟೇ – ಅವರ ಸ್ನಾನಕ್ಕಾಗಿ ಅಡುಗೆಮನೆಯಿಂದ ಒಂದು ಜಗ್‌ನಲ್ಲಿ ಬಿಸಿನೀರು ತಂದುಕೊಡುವುದು ಮತ್ತು ಅವರ ಬಟ್ಟೆಗಳನ್ನು ಹಿಂಡುವುದು. ಅವರದು ತಪಸ್ವೀಜೀವನ. ಹೀಗಾಗಿ ಅವರ ವೈಯಕ್ತಿಕ ಅಗತ್ಯಗಳಿದ್ದುದು ಬಹಳ ಕಡಮೆ. ಅಷ್ಟನ್ನೂ, ಬೇರೆಯವರು ಮಾಡಿಕೊಡುವುದೆಂದರೆ ಅವರಿಗೆ ಇಷ್ಟವಾಗುತ್ತಿರಲಿಲ್ಲ.

ಅಡುಗೆಮನೆಯಿಂದ ತಂದ ಬಿಸಿನೀರನ್ನು ಒಂದು ಬಕೆಟ್ ತಣ್ಣಗಿನ ನೀರಿನಲ್ಲಿ ಬೆರೆಸಿ, ಪೂಜ್ಯ ಸ್ವಾಮೀಜಿಯವರು ಸ್ನಾನ ಮಾಡುತ್ತಿದ್ದರು. ಒಂದು ದಿನ ಅಡುಗೆಮನೆಯಿಂದ ತಂದ ನೀರು ಎಂದಿಗಿಂತ ಹೆಚ್ಚು ಬಿಸಿಯಾಗಿತ್ತು. ಸ್ನಾನದ ಮನೆಯಲ್ಲಿ ಬಿಸಿನೀರನ್ನು ಇಟ್ಟು ನಾನು ಅವರಿಗೆ ಹೇಳಿದೆ, "ಮಹಾರಾಜ್, ಇವತ್ತು ನೀರು ಬಹಳ ಬಿಸಿಯಾಗಿದೆ, ಹುಷಾರು." ಇದನ್ನು ಕೇಳಿದೊಡನೆ ಅವರು ಸ್ನಾನದ ಕೊಠಡಿಗೆ ಹೋದರು. ಬಿಸಿನೀರಿದ್ದ ಜಗ್‌ನ ಕಡೆಗೆ ದೃಷ್ಟಿ ಹಾಯಿಸಿದರು. ನನ್ನನ್ನು ಕರೆದು ಹೀಗೆಂದರು, "ಬರೀ ಮಿದುಳಿದ್ದರೆ ಸಾಲದು, ಅದನ್ನು ಉಪಯೋಗಿಸಲೂ ಬೇಕು." ಇವರೇನು ಹೇಳುತ್ತಿದ್ದಾರೆ ಎನ್ನುವುದು ಮೊದಲು ನನಗೆ ಗೊತ್ತಾಗಲಿಲ್ಲ. ನೀರು ಎಂದಿಗಿಂತ ಬಿಸಿಯಾಗಿಡೆ ಎಂದು ಮುಂಚೆಯೇ ಹೇಳಿದ್ದರಲ್ಲಿ ನನ್ನ ಬುದ್ಧಿವಂತಿಕೆಯನ್ನು ಪ್ರದರ್ಶಿಸಿದ್ದೇನೆ ಎಂದು ನಾನಂದುಕೊಂಡಿದ್ದೆ. ತಮ್ಮ ಮಾತಿಗೆ ಅವರೇ ವಿವರಣೆ ಕೊಟ್ಟರು: "ನೀರು ಬಹಳ ಬಿಸಿಯಾಗಿದ್ದರೆ, ನೀನು ಕಡಮೆ ಪ್ರಮಾಣದಲ್ಲಿ ತರಬಹುದಾಗಿತ್ತಲ್ಲವೇ?! ಎಂದಿನ ಪ್ರಮಾಣದಲ್ಲಿರುವ ತಣ್ಣಗಿನ ನೀರಿನಲ್ಲಿ ಅದನ್ನು ನಾನು ಬೆರೆಸಿಕೊಳ್ಳುತ್ತಿದ್ದೆ. ಈಗ ನಾನು ಸ್ವಲ್ಪ ಬಿಸಿನೀರನ್ನು ಅನವಶ್ಯಕವಾಗಿ ವ್ಯರ್ಥಮಾಡಬೇಕಾಗಿದೆ." ನಾನೀಗ ಅರಿತುಕೊಂಡೆ, ಬುದ್ಧಿವಂತನಾಗಿರುವುದು ಅಷ್ಟು ಸುಲಭವಲ್ಲ ಎಂದು!

ಪೂಜ್ಯ ಸ್ವಾಮೀಜಿಯವರು ಉಪಯೋಗಿಸುತ್ತಿದ್ದ ಸ್ನಾನದ ಟವೆಲ್ ಅಕ್ಷರಶಃ 'ರಂಧ್ರಮಯ'ವಾಗಿತ್ತು. ಬಟ್ಟೆಗಿಂತಲೂ ಅದರಲ್ಲಿ ತೂತುಗಳೇ ಹೆಚ್ಚಾಗಿದ್ದವು. ಅದನ್ನು ತೆಗೆದು, ಹೊಸದೊಂದನ್ನು ಪಡೆದುಕೊಳ್ಳುವಂತೆ ನಾನು ವಿನಂತಿಸಿಕೊಂಡೆ. ಅದಕ್ಕೆ ಅವರು ನೀಡಿದ ಬಿಗುಮಾನದ ಉತ್ತರ ಹೀಗಿತ್ತು: "ಸ್ನಾನವಾದ ಮೇಲೆ ನನ್ನ ಮೈಯಲ್ಲಿರುವ ನೀರನ್ನು ಒರೆಸುವುದಕ್ಕಷ್ಟೇ ನಾನದನ್ನು ಉಪಯೋಗಿಸುತ್ತೇನೆ. ಇದನ್ನು ಉಟ್ಟುಕೊಂಡು, ನಾನು ಹೊರಗಡೆಯೇನೂ ಹೋಗುವುದಿಲ್ಲವಲ್ಲಾ. ಟವೆಲ್ ಆಗಿ ಇದು ಪೂರ್ಣಪ್ರಮಾಣದಲ್ಲಿ ನನಗೆ ಉಪಯೋಗಕಾರಿಯಾಗಿದೆ. ಹೀಗಾಗಿ ಇದು ಆವಶ್ಯಕತೆಗಿಂತಲೂ ಹೆಚ್ಚೇ ಸರಿ." ಆಗ ನಾನು ಅರ್ಥಮಾಡಿಕೊಂಡೆ, ಆ ಟವೆಲ್ಲಿನ ಬಗ್ಗೆ ಇನ್ನು ಹೆಚ್ಚು ಮಾತನಾಡುವುದು ಅವರಿಗೆ ಇಷ್ಟವಿಲ್ಲ ಎಂದು!

ಒಮ್ಮೆ ನನಗೆ ಕಣ್ಣುನೋವು ಬಂದಿತು. ಪರೀಕ್ಷೆ ಮಾಡಿದ

ವೈದ್ಯರು, ಕೆಲತಿಂಗಳುಗಳ ಕಾಲ ಕಪ್ಪುಕನ್ನಡಕವನ್ನು ಧರಿಸಲು ಸೂಚಿಸಿದರು. ನಾನು ಹೊಸಬನಾಗಿದ್ದರಿಂದ ಬೇರೆಯವರ ಮುಂದೆ ಕಪ್ಪುಕನ್ನಡಕವನ್ನು ಧರಿಸಲು ನನಗೆ ನಾಚಿಕೆಯಾಯಿತು. ಆದರೆ ಈ ಬಗ್ಗೆ ಸ್ವಾಮೀಜಿಯವರಿಗೆ ಹೇಳಲೂ ಮುಜುಗರ. ಹೀಗಾಗಿ ಅವರ ಮುಂದೆ ಮಾತ್ರ ನಾನು ಆ ಕನ್ನಡಕವನ್ನು ಹಾಕಿಕೊಳ್ಳುತ್ತಿದ್ದೆ. ಮಿಕ್ಕ ಸಮಯದಲ್ಲಿ ತೆಗೆದಿಡುತ್ತಿದ್ದೆ! ಹೀಗೆಯೇ ಕೆಲದಿನಗಳು ಕಳೆದವು. ಆದರೆ ಒಂದು ದಿನ, ಹೇಗೋ ಏನೂ ಸಿಕ್ಕಿಬಿದ್ದೆ! ಸ್ವಾಮೀಜಿ ಆಗ ನನ್ನನ್ನು ಚೆನ್ನಾಗಿ ತರಾಟೆಗೆ ತೆಗೆದುಕೊಳ್ಳುತ್ತ ಹೀಗೆ ಹೇಳಿದರು: "ಬೇಕಾದಾಗ ಹಾಕಿಕೊಂಡು, ತೆಗೆದಿಡುವುದಕ್ಕೆ ನಿನಗೆ ಕೊಟ್ಟದ್ದು ಚಿನ್ನದ ಸರವನ್ನೇನಲ್ಲ. ಈ ಕನ್ನಡಕವನ್ನು ಎಲ್ಲಾ ಸಮಯದಲ್ಲಿಯೂ ಹಾಕಿಕೊಂಡಿರಲೇಬೇಕು. ಕನ್ನಡಕವಿಲ್ಲದೆ ಇನ್ನೊಮ್ಮೆ ನಾನು ನಿನ್ನನ್ನು ನೋಡುವಂತೆ ಆಗಬಾರದು."

ಪೂಜ್ಯ ಸ್ವಾಮೀಜಿಯವರು ಮಠದ ಬ್ರಹ್ಮಚಾರಿಗಳಿಗೆ ನೀಡುತ್ತಿದ್ದ ಸಲಹೆ ಇದು: "ಚೆನ್ನಾಗಿ ಊಟಮಾಡಿ, ಚೆನ್ನಾಗಿ ಅಧ್ಯಯನ ಮಾಡಿ ಮತ್ತು ಚೆನ್ನಾಗಿ ಆಟವಾಡಿ." ಎಲ್ಲ ಬ್ರಹ್ಮಚಾರಿಗಳೂ ಒಂದು ಗಂಟೆಯಾದರೂ ಆಡುವುದು ಅಥವಾ ಜಾಗಿಂಗ್ ಮಾಡುವುದು ಕಡ್ಡಾಯವಾಗಿತ್ತು. ಈಗಿನ ಊಟದ ಮನೆಯ ಮುಂಭಾಗದಲ್ಲಿದ್ದ ಪ್ರಾಂಗಣದಲ್ಲಿ ಸಂನ್ಯಾಸಿಗಳು ಮತ್ತು ಬ್ರಹ್ಮಚಾರಿಗಳು ಶಟಲ್ ಬ್ಯಾಡ್ಮಿಂಟನ್ ಆಡುತ್ತಿದ್ದರು. ಪೂಜ್ಯ ಸ್ವಾಮೀಜಿಯವರು ಅಡುಗೆಯ ಮನೆಯ ವರಾಂಡದಲ್ಲಿ ನಡೆದಾಡುತ್ತ ನಮ್ಮನ್ನು ಗಮನಿಸುತ್ತಲೇ ಇರುತ್ತಿದ್ದರು. ಒಬ್ಬ ಬ್ರಹ್ಮಚಾರಿಗಳು – ಸ್ವಲ್ಪ ದಪ್ಪಗಿದ್ದವರು – ಆಟವಾಡುವ ಸಮಯದಲ್ಲಿ ಆಗಾಗ್ಯೆ ಬೀಳುತ್ತಿದ್ದರು. ಇದನ್ನು ನೋಡಿದಾಗಲೆಲ್ಲ, ಪೂಜ್ಯ ಸ್ವಾಮೀಜಿಯವರು ಇತರರ ಜೊತೆಗೂಡಿ, ಮುಕ್ತವಾಗಿ ನಗೆಯಾಡುತ್ತಿದ್ದರು. ಕೆಲವೊಮ್ಮೆ ನಮ್ಮ ನಗು ಎಲ್ಲೆ ಮೀರುತ್ತಿತ್ತು. ಆಗ ಸ್ವಾಮೀಜಿ ಉದ್ಗರಿಸುತ್ತಿದ್ದರು: "ಅವರು ರಾವಣನಂತೆ ನಗುತ್ತಿದ್ದಾರೆ!"

ಇಂದು ತಲೆಯೆತ್ತಿರುವ 'ವಿಶ್ವಭಾವೈಕ್ಯ ದೇವಮಂದಿರ'ವು ಆ ದಿನಗಳಲ್ಲಿ ಇರಲಿಲ್ಲ. ನಾವೀಗ ಯಾವುದನ್ನು 'ಹಳೆಯ ದೇವಸ್ಥಾನ' ವೆಂದು ಕರೆಯುತ್ತೇವೆಯೋ, ಅದೇ ಅಂದು ಮುಖ್ಯ ದೇವಾಲಯವಾಗಿತ್ತು. ಸಾಯಂಕಾಲದ ಆರಾತ್ರಿಕ ಆರಾಧನೆಗೆ ಮೊದಲು ದೇವಸ್ಥಾನದಲ್ಲಿ ಧೂಪವನ್ನು ಹಚ್ಚಲಾಗುತ್ತಿತ್ತು. ಅದಕ್ಕಾಗಿ ಬೇಕಾಗುವ ಕೆಂಡವನ್ನು ಅಡುಗೆಮನೆಯಿಂದ ತೆಗೆದುಕೊಂಡುಹೋಗಲಾಗುತ್ತಿತ್ತು. ಈ ಕೆಲಸವನ್ನು ಒಬ್ಬ ಬ್ರಹ್ಮಚಾರಿಗಳು ಮಾಡುತ್ತಿದ್ದರು. ಅವರು ಪ್ರಾಂಗಣದ ಮಧ್ಯದಲ್ಲಿಯೇ ಹಾದುಹೋಗುತ್ತಿದ್ದರು. ಆ ಸಮಯದಲ್ಲಿ ನಾವೆಲ್ಲ ಆಟವಾಡುತ್ತಿದ್ದೆವು ಮತ್ತು ಪೂಜ್ಯ ಸ್ವಾಮೀಜಿಯವರು ನಡೆದಾಡುತ್ತಿದ್ದರು. ಯಾವಾಗಲಾದರೊಮ್ಮೆ ಆ ಬ್ರಹ್ಮಚಾರಿ ಬರುವುದು ತಡವಾದಾಗ, ಅವರು ಹಾಸ್ಯವಾಗಿ ಕೇಳುತ್ತಿದ್ದರು: "ಆ 'ಹೊಗೆಯ ಮನುಷ್ಯ' ನಿಗೆ ಏನಾಯಿತು? ಅವನು ಕಾಣಿಸುತ್ತಲೇ ಇಲ್ಲವಲ್ಲ!" ಸುಡುತ್ತಿರುವ ಕೆಂಡಕ್ಕೆ ಸುಗಂಧದ ಪುಡಿಯನ್ನು ಹಾಕಿದಾಗ, ದಟ್ಟವಾದ ಹೊಗೆಯೇಳುತ್ತಿತ್ತು. ಈ ಹೊಗೆಯನ್ನು ಉಂಟುಮಾಡುತ್ತಿದ್ದ ಆ ಬ್ರಹ್ಮಚಾರಿಯು ಸ್ವಾಮೀಜಿಯವರ ಪಾಲಿಗೆ 'ಹೊಗೆಯ ಮನುಷ್ಯ'ನೇ ಆಗಿಬಿಟ್ಟಿದ್ದ!

ಒಮ್ಮೆ ಪೂಜ್ಯ ಸ್ವಾಮೀಜಿಯವರ ಫೋಟೋ ತೆಗೆಯಲು ಏರ್ಪಾಡಾಗಿತ್ತು. ಒಬ್ಬ ಬ್ರಹ್ಮಚಾರಿಯೇ ಫೊಟೋಗ್ರಾಫರ್. ಫೋಟೋ ತೆಗೆಯುವುದಕ್ಕೆ ಸ್ವಾಮೀಜಿ ಅನುಮತಿ ನೀಡುತ್ತಾರೆಯೇ ಎನ್ನುವುದರ ಬಗ್ಗೆ ನಮಗೆ ಖಾತರಿ ಇರಲಿಲ್ಲ. ಆದ್ದರಿಂದ ಮಧ್ಯಾಹ್ನದ ಊಟದ ಸಮಯದಲ್ಲಿ ಅವರು ಆಫೀಸಿನಿಂದ ಹಿಂತಿರುಗುವಾಗ, ಫೋಟೋ ತೆಗೆಯಲು ಅವರ ಅನುಮತಿಯನ್ನು ಕೇಳಿಕೊಳ್ಳುವುದು ಎಂದು ನಿಶ್ಚಯಿಸಿದೆವು. 'ವೇದಾಂತ ಕೇಸರಿ' ಪತ್ರಿಕೆಯ ಈಗಿನ ಕಛೇರಿಯ ಮುಂದೆ (ಹಿಂದೆ ಅದು ಪುಸ್ತಕ ಮಾರಾಟ ಕೇಂದ್ರವಾಗಿತ್ತು), ಒಂದು ಕುರ್ಚಿಯನ್ನೂ ಹಾಕಿದ್ದೆವು. ಪೂಜ್ಯ ಸ್ವಾಮೀಜಿಯವರು ತಮ್ಮ ಆಫೀಸಿನಿಂದ ಮಧ್ಯಾಹ್ನ ೧೨.೩೦ಕ್ಕೆ ಹೊರಬಂದರು. ಆಗ ಮ್ಯಾನೇಜರ್ ಮಹಾರಾಜರು ಫೋಟೋವನ್ನು ತೆಗೆದುಕೊಳ್ಳುವುದಕ್ಕೆ ಅವರ ಅನುಮತಿ ಕೋರಿದರು. ಸ್ವಾಮೀಜಿ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಂಡರು. ಬಂದು ಕುರ್ಚಿಯ ಮೇಲೆ ಕುಳಿತರು. ಫೋಟೋವನ್ನು ತೆಗೆಯಬೇಕಾಗಿದ್ದ ಬ್ರಹ್ಮಚಾರಿ ಸುತ್ತಲೂ ಇದ್ದ ಹೂವಿನ ಕುಂಡಗಳನ್ನು ಸರಿಯಾಗಿ ಜೋಡಿಸಲು ಆರಂಭಿಸಿದರು. ಇದರಲ್ಲೇ ಬಹಳಷ್ಟು ಸಮಯ ಕಳೆದುಹೋಯಿತು. ಆನಂತರ ಅವರು ಸ್ವಾಮೀಜಿಯವರ ಬಟ್ಟೆಯನ್ನು ಸರಿಪಡಿಸಲು ಆರಂಭಿಸಿದರು. ಹೀಗೇ ಸಮಯ ಕಳೆದುಹೋಗುತ್ತಿತ್ತು. ಸ್ವಾಮೀಜಿಗೆ ಹಸಿವು. ಕಡೆಗೆ ಎಲ್ಲ ಸಂಗತಿಗಳೂ ಸರಿಯಾಗಿವೆ ಎಂದು ನಿರ್ಧರಿಸಿದ ಮೇಲೆ, ಆ ಬ್ರಹ್ಮಚಾರಿಗಳು ಸ್ವಾಮೀಜಿಯವರ ಬಳಿ ಹೋಗಿ ನಿವೇದಿಸಿಕೊಂಡರು, "ಮಹಾರಾಜ್, ದಯವಿಟ್ಟು ನಿಮ್ಮ ತಲೆಯನ್ನು ಸ್ವಲ್ಪ ಬಗ್ಗಿಸಿ. ಆಗ ಮಾತ್ರ ನಿಮ್ಮ ಫೋಟೋ ಚೆನ್ನಾಗಿ ಬರುತ್ತದೆ." ಒಡನೆ ಸ್ವಾಮೀಜಿ ಉತ್ತರಿಸಿದರು, "ನೀನು ಇನ್ನಷ್ಟು ತಡಮಾಡಿದರೆ, ನಾನು ಸ್ವಂತ ಇಚ್ಛೆಯಿಂದ ನನ್ನ ತಲೆಯನ್ನು ಬಗ್ಗಿಸಬೇಕಾದ ಆವಶ್ಯಕತೆ ಒದಗಿಬರುವುದೇ ಇಲ್ಲ. ಅದು ತಾನೇತಾನಾಗಿ ಬಿದ್ದುಹೋಗುತ್ತದೆ." ಇದನ್ನು ಕೇಳಿ ನಾವೆಲ್ಲರೂ ಗೊಳ್ಳೆಂದು ನಕ್ಕೆವು.

ಒಮ್ಮೆ ಶ್ರೀರಾಮಕೃಷ್ಣರನ್ನು ಕುರಿತ ನಾಟಕವೊಂದು ಮಠದಲ್ಲಿ ಏರ್ಪಾಡಾಗಿತ್ತು. ಸ್ವಾಮೀಜಿಯವರು ಎಂದೂ ನಾಟಕಗಳನ್ನು ವೀಕ್ಷಿಸುತ್ತಿರಲಿಲ್ಲ. ಆದರೆ ನಾಟಕದ ಕೆಲವು ಫೋಟೋಗಳನ್ನು ಅವರಿಗೆ ತೋರಿಸಲಾಯಿತು. ನಾಟಕದಲ್ಲಿ, ಭಗವಾನ್

ಶ್ರೀರಾಮಕೃಷ್ಣರ ಗುರುವಾದ ತೋತಾಪುರಿಯ ಪಾತ್ರವೂ ಇತ್ತು. ಆತನು ಬರಿ ಕೌಪೀನ ಮಾತ್ರ ಹಾಕಿಕೊಳ್ಳುವುದು ಎಂದು ನಿರ್ಧರಿಸಲಾಗಿತ್ತು. ಆದರೆ ಇದು ಸ್ವಲ್ಪ ಅಶ್ಲೀಲವಾಗಿ ಕಾಣಬಹುದೆಂದು, ಕೌಪೀನದ ಮೇಲೆ ಒಂದು ಸಣ್ಣ ಟವೆಲನ್ನು ಮುಂಭಾಗದಲ್ಲಿ ಮಾತ್ರ ಇಳಿಬಿಡಲಾಗಿತ್ತು. ನಾಟಕದ 'ತೋತಾಪುರಿ' ಯ ಈ ಬಗೆಯ ವೇಷದ ಫೋಟೋವನ್ನು ನೋಡಿ ಸ್ವಾಮೀಜಿ ಕೇಳಿದರು, 'ನೀಳವಾಗಿರುವ (vertical) ಟವಲನ್ನು ಹಾಕಿಕೊಂಡಿರುವ ಈ ವ್ಯಕ್ತಿ ಯಾರು?" ಎಂದು. ಸ್ವಾಮಿ ತಪಸ್ಯಾನಂದಜಿ ಮಹಾರಾಜರ ಈ ರೀತಿಯ ಹಾಸ್ಯ ಉಮ್ಮಳಿಸುವಂಥ ಉದ್ಗಾರಗಳು ಮತ್ತು ಪದಪುಂಜಗಳು, ಎಂದೆಂದಿಗೂ ನಮಗೆ ಆನಂದವನ್ನು ಕೊಡುವಂಥವೇ ಆಗಿವೆ!

ನಾನು ಪೂಜ್ಯ ಸ್ವಾಮೀಜಿಯವರನ್ನು ನೆನೆಸಿಕೊಂಡಂತೆಲ್ಲ ನನ್ನ ಮನಸ್ಸಿಗೆ ಬರುವ ಕೆಲವು ಆಹ್ಲಾದಕಾರಿ ಘಟನೆಗಳು ಇವು.

ಮಂಜಿನ ಹನಿಗಳ ಪರಿಣಾಮ: ಬೆಳಗಿನ ಹೊತ್ತು ಮಂಜಿನ ಹನಿಗಳು ನಿಧಾನವಾಗಿ ಬೀಳುತ್ತವೆ. ಅವನ್ನು ಯಾರೂ ನೋಡುವುದಿಲ್ಲ; ಅವು ಬೀಳುವ ಶಬ್ದವನ್ನು ಯಾರೂ ಕೇಳಿಸಿಕೊಳ್ಳುವುದೂ ಇಲ್ಲ. ಆದರೆ, ಹೂವುಗಳು ಅರಳಲು ಆ ಮಂಜಿನ ಹನಿಗಳು ಬೀರುವ ಪ್ರಭಾವವು ಅಗಾಧವಾದುದು. ಪೂಜ್ಯ ಸ್ವಾಮೀಜಿಯವರ ಜೊತೆಗೆ ಸಂಪರ್ಕಕ್ಕೆ ಬಂದ ಭಾಗ್ಯಶಾಲಿಗಳ ಮೇಲೆ ಉಂಟಾಗುವ ಅವರ ಪ್ರಭಾವವೂ ಅಂತಹುದೇ – ಮೃದುವಾದದ್ದು, ಹಾಗೆಯೇ ಗಾಢವಾದದ್ದು. ಅವರ ಒಡನಾಟವೇ ತಮಗೆ ಒದಗಿಬಂದ ಸುವರ್ಣಾವಕಾಶ ಎಂದು ಅಂಥವರಲ್ಲಿ ಎಷ್ಟು ಜನ ತಾನೇ ಮನವರಿಕೆ ಮಾಡಿಕೊಂಡಿದ್ದಾರೆ? ಆದರೆ, ಕಾಲದ ಹಿಂತಿರುಗಿ ನೋಡಿದರೆ, ಅವರ ಜೊತೆಗೆ ನಿಕಟ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರ ಮೇಲೆಯೂ ಅವರು ಚಿರಂತನ ಮುದ್ರೆಯನ್ನು ಬಿತ್ತಿದ್ದಾರೆ ಎನ್ನುವುದಂತೂ ಬಹು ಸ್ಪಷ್ಟ.

ಪರಮಪೂಜ್ಯ ಸ್ವಾಮಿ ತಪಸ್ಯಾನಂದಜಿ ಮಹಾರಾಜರು ರಾಮಕೃಷ್ಣ ಮಹಾಸಂಘವು ನಿರ್ಮಾಣ ಮಾಡಿದ ಒಬ್ಬ ಅತ್ಯಂತ ಶ್ರೇಷ್ಠ ಸಾಧುಗಳು. ಈ ಹೇಳಿಕೆಯ ಬೆಳಕಿನಲ್ಲಿ ನಾನು ಅವರ ಬಗ್ಗೆ ಚಿಂತಿಸಿದಾಗಲೆಲ್ಲ, ನನ್ನ ಮನಸ್ಸಿಗೆ ಒಮ್ಮೆಲೇ ಬರುವ ಸಂಗತಿಯೆಂದರೆ ಅವರ **'ತ್ಯಾಗ ಮನೋಭಾವನೆ'**. ಪೂಜ್ಯ ಸ್ವಾಮೀಜಿಯವರು ಅತ್ಯಂತ ಶ್ರೇಷ್ಠಮಟ್ಟದ ಸಂನ್ಯಾಸಿಗಳು. ಹೀಗಾಗಿ ಅವರಿಗೆ ಭೌತಿಕ ಜಗತ್ತು ಯಾವ ಆಕರ್ಷಣೆಯನ್ನೂ ಒಡ್ಡುತ್ತಿರಲಿಲ್ಲ. ಏಕೆಂದರೆ, ಅವರು ಪ್ರಪಂಚದಲ್ಲಿ ಕಂಡುಬರುವ, ಸುಖವೆಂದು ಕರೆಯುವ ಭ್ರಮೆಯ ಸಂಗತಿಗಳಲ್ಲಿ ಯಾವ ಸುಖದೃಷ್ಟಿಯನ್ನೂ ಬೆಳೆಸಿಕೊಂಡಿರಲಿಲ್ಲ. ಆಹಾರಕ್ಕಾಗಲಿ, ಬಟ್ಟೆಗಳಿಗಾಗಲಿ ಅಥವಾ ಇನ್ನಾವುದೇ ಪದಾರ್ಥಕ್ಕಾಗಲಿ ಅವರು ಎಳ್ಳಷ್ಟೂ ಮಹತ್ವವನ್ನು ನೀಡಿದವರಲ್ಲವೇ ಅಲ್ಲ. ಹಾಗೆಯೇ ಅವರು ಸಂಗೀತ, ನಾಟಕ ಅಥವಾ ಇನ್ನಾವುದೇ ಮನರಂಜನೆಯ ಚಟುವಟಿಕೆಗಳಲ್ಲಿ ಸ್ವಲ್ಪವೂ ಆಸಕ್ತಿಯನ್ನು ತೋರಿಸುತ್ತಿರಲಿಲ್ಲ.

ಸರ್ವಸಂಗಪರಿತ್ಯಾಗಿಗಳಾದ ಸಂನ್ಯಾಸಿಗಳು ಕೂಡ ಒಂದು ವಿಷಯದಲ್ಲಿ ಆಸಕ್ತಿಯನ್ನು ತೋರುವರು. ಅದೆಂದರೆ ತೀರ್ಥಯಾತ್ರೆ. ಆದರೆ ಪೂಜ್ಯ ಸ್ವಾಮೀಜಿಯವರು ತೀರ್ಥಯಾತ್ರೆಯನ್ನು ಕೈಗೊಳ್ಳುವುದರಲ್ಲಿಯೂ ಕಿಂಚಿತ್ತೂ ಅಭಿಲಾಷೆಯನ್ನು ವ್ಯಕ್ತಪಡಿಸಿದವರಲ್ಲ. ಶ್ರೀರಾಮಕೃಷ್ಣರ ಭಕ್ತರಿಗೆ ದಕ್ಷಿಣೇಶ್ವರವೇ ಕಾಶಿ, ಬೃಂದಾವನ ಎಲ್ಲವೂ ಆಗಿದೆ. ಆದರೆ ಸ್ವಾಮೀಜಿಯವರು ಅಲ್ಲಿಗೆ ಹೋಗಲೂ ಉತ್ಸುಕರಾಗಿರಲಿಲ್ಲ. ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳ ಸಭೆಯಲ್ಲಿ ಪಾಲ್ಗೊಳ್ಳಲು ಅವರು ವರ್ಷಕ್ಕೆ ಮೂರು ಸಲ ಬೇಲೂರು ಮಠಕ್ಕೆ ಹೋಗಿಬರುತ್ತಿದ್ದರು. ಅಲ್ಲಿಂದ ದಕ್ಷಿಣೇಶ್ವರಕ್ಕೆ ಕೇವಲ ಅರ್ಧಗಂಟೆಯ ಪ್ರಯಾಣ. ಆದರೆ ಅವರು ಹೋಗುತ್ತಿರಲಿಲ್ಲ. ಒಮ್ಮೆ ಯಾರೋ ಅವರನ್ನು ಕೇಳಿದರು, "ಸ್ವಾಮೀಜಿ, ನೀವು ದಕ್ಷಿಣೇಶ್ವರಕ್ಕೆ ಯಾವಾಗಲಾದರೂ ಒಮ್ಮೆ ಭೇಟಿಕೊಟ್ಟಿದ್ದೀರೇನು?" ಎಂದು. ಅದಕ್ಕೆ ಸ್ವಾಮೀಜಿ ಉತ್ತರಿಸಿದರು: "ಹೌದು, ಸುಮಾರು ೪೦ ಅಥವಾ ೪೫ ವರ್ಷಗಳ ಹಿಂದೆ." "ನೀವು ಹಿಮಾಲಯಕ್ಕೆ ಹೋಗಿದ್ದೀರೇನು?" ಎಂಬ ಇನ್ನೊಂದು ಪ್ರಶ್ನೆಗೆ ಅವರ ಉತ್ತರ ಹೀಗಿತ್ತು: "ಓ, ಇಲ್ಲ, ಇಲ್ಲ." ಇದಲ್ಲದೆ, ಈ ಬಗೆಯ ವೈಯಕ್ತಿಕ ಪ್ರಶ್ನೆಗಳನ್ನು ಕೇಳುವುದಕ್ಕೆ ಅವರು ಸರ್ವಥಾ ಉತ್ತೇಜನ ನೀಡುತ್ತಿರಲಿಲ್ಲ.

ಹಾಗೆಂದು ತೀರ್ಥಯಾತ್ರೆಗಳಲ್ಲಿ ಅವರು ವಿಶ್ವಾಸವನ್ನೇ ಇಟ್ಟಿರಲಿಲ್ಲ ಎಂದೇನೂ ಅಲ್ಲ. ಅವರಿಗೆ, ನಿಜವಾದ ತೀರ್ಥಯಾತ್ರೆಯೆಂದರೆ ಮನಸ್ಸಿನ ಅಂತರಂಗದ ಪ್ರವೇಶವೇ ಆಗಿತ್ತು; ಶ್ರೀರಾಮಕೃಷ್ಣರ ಕಾರ್ಯವನ್ನು ಪರಿಶುದ್ಧ ಮನಸ್ಸಿನಿಂದ ಶ್ರದ್ಧಾಪೂರ್ವಕವಾಗಿ ಮಾಡುವುದೇ ಆಗಿತ್ತು. ಇವುಗಳನ್ನು ಕೈಗೊಳ್ಳಲು 'ತಪಸ್ಯೆ'ಯೊಂದೇ ಏಕಮೇವ ಮಾರ್ಗವೆಂದು ಅವರು ಭಾವಿಸಿದ್ದರು. ಹಾಗೆಂದೇ ಅವರು ತಪಸ್ಯೆಯ ಜೀವನದಲ್ಲಿಯೇ ಆನಂದವನ್ನು ಕಂಡುಕೊಂಡಿದ್ದರು. ಅವರಿಗೆ ಪ್ರಾಪಂಚಿಕ ಜಗತ್ತಿನಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ಆದ್ದರಿಂದಲೇ ಅವರು ತಮ್ಮ ಆವಶ್ಯಕತೆಗಳನ್ನು ಅತ್ಯಂತ ಕನಿಷ್ಠಗೊಳಿಸಿಕೊಂಡಿದ್ದರು. ತಾವಾಗಿಯೇ ಇತರರಿಂದ ಯಾವುದನ್ನೂ ಸ್ವೀಕರಿಸುತ್ತಿರಲಿಲ್ಲ.

(ಮುಂದುವರೆಯುವುದು)